## 2017 ಕ.ತೀ.ವ 01

## ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ರೊ ಕಮಲ್ ಮುಖರ್ಜಿ
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳಿಮಠ್

### ಮೆ॥ ಇಎಂಟಿಎ ಕೋಲ್ ಲಿಮಿಟೆಡ್ ಮತ್ತು ಮತ್ತೊಬ್ಬರು
### –ವಿರುದ್ಧ– ಮೆ॥ ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ನಿಯಮಿತ*

ಭಾರತ ಸಂವಿಧಾನದ 226ನೇ ಅನುಚ್ಛೇದದಡಿಯಲ್ಲಿನ ರಿಟ್ ಅರ್ಜಿ.

ರಾಜ್ಯದ ಕ್ರಮವು ನಿರಂಕುಶ ಅಥವಾ ತಾರತಮ್ಯದಿಂದ ಕೂಡಿದಾಗ, ಅದು ಭಾರತ ಸಂವಿಧಾನದ 14ನೇ ಅನುಚ್ಛೇದದ ಉಲ್ಲಂಘನೆಯಾಗುತ್ತದೆಂಬುದು ಇತ್ಯರ್ಥಗೊಂಡ ಕಾನೂನಾಗಿದ್ದಾಗ್ಯೂ, ಸಾಮಾನ್ಯವಾಗಿ ರಿಟ್ ಅಧಿಕಾರ ವ್ಯಾಪ್ತಿಯಲ್ಲಿ ಉಚ್ಚ ನ್ಯಾಯಾಲಯವು ಕರಾರು ಎನ್ನುವಷ್ಟರ ಮಟ್ಟಿಗಿನ ಕರಾರಿನ ನಿಬಂಧನೆಗಳನ್ನು ಜಾರಿಗೊಳಿಸದಿದ್ದಾಗ್ಯೂ ರಿಟ್ ಅರ್ಜಿಯು ಖಂಡಿತವಾಗಿಯೂ ಊರ್ಜಿತವಾಗಿರುತ್ತದೆ. ರಾಜ್ಯದ ವಿರುದ್ಧದ ರಿಟ್ ಅರ್ಜಿಗಳು ಅಥವಾ ರಾಜ್ಯದ ಲಿಖಿತ ಪತ್ರಗಳ ಕರಾರುಜನ್ಯ ಆಪಾದನೆಗಳಿಂದ ಉದ್ಭವಿಸಿದ ವಿವಾದಗಳು ಕೂಡ ಊರ್ಜಿತವಾಗಿರುತ್ತವೆ.

ರಾಜ್ಯದ ಲಿಖಿತದ ರೂಪದಲ್ಲಿರುವ ಕೆಪಿಸಿಎಲ್ ಅನ್ನು ಯುಕ್ತವಾಗಿ ಅಥವಾ ನಿರಂಕುಶ ರೀತಿಯಲ್ಲಿ ನಿರೀಕ್ಷಿಸಬಹುದಾಗಿರುತ್ತದೆ.

ಪ್ರಾಧಿಕಾರದ ಪ್ರತಿಯೊಂದು ಕ್ರಮವು ಕಾನೂನಿನ ನಿಯಮಕ್ಕೆ ಒಳಪಟ್ಟಿರತಕ್ಕದ್ದು ಹಾಗೂ ಕಾರಣದ ಮೂಲಕ ಮಾಹಿತಿಯನ್ನು ನೀಡಿರತಕ್ಕದ್ದೆಂದು ಅಭಿಪ್ರಾಯಪಟ್ಟಿದೆ. ಕರಾರು ಜನ್ಯ ವಿಷಯಗಳಲ್ಲಿಯೂ ಕೂಡ ರಾಜ್ಯದ ಕ್ರಮವು ಯುಕ್ತತೆಯ ಪರೀಕ್ಷೆಗಳನ್ನು ಭರಿಸಲು ವಿಫಲವಾದಲ್ಲಿ ಇದು ಸಂವಿಧಾನ ಬಾಹಿರವಾಗುತ್ತದೆ.

*ರಿಟ್ ಅರ್ಜಿ ಸಂಖ್ಯೆ: 2995–2996/2016 ಇದರೊಂದಿಗೆ ಇತರೆ, ದಿನಾಂಕ: 24ನೇ ಮಾರ್ಚ್, 2016.

ಇಂಧನ ಪೂರೈಕೆ ಒಪ್ಪಂದವು, ಕಲ್ಲಿದ್ದಲನ್ನು ತೊಳೆಯುವಾಗ ಸಾಂಪ್ರದಾಯಿಕವಾಗಿ ನೀರಿನಿಂದಲಾಗಲೀ ಅಥವಾ ಆಧುನಿಕ ರೂಪವಾದ ಡ್ರೈವಾಷ್ ಪ್ರಕ್ರಿಯೆಯಿಂದಾಗಲೀ, ಯಾವುದೇ ರೂಪದಲ್ಲಿ ತೊಳೆದರೂ, ಅದನ್ನು ಲಕ್ಷಿಸದೆ ಇಂಧನವನ್ನು ಸರಬರಾಜು ಮಾಡಲೇಬೇಕೆಂಬ ಗೊತ್ತುಪಡಿಸಿದ ಮಾನದಂಡವನ್ನು ಪೂರೈಸಿ ನಿರ್ದಿಷ್ಟಪಡಿಸುತ್ತದೆ. ಕೆಪಿಸಿಎಲ್‌ಗೆ ರಿಟ್ ಅರ್ಜಿದಾರರಿಂದ ಪೂರೈಸಿದ ಕಲ್ಲಿದ್ದಲು, ಇಂಧನ ಪೂರೈಕೆ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ ಮಾನದಂಡಗಳನ್ನು ಭರಿಸುತ್ತದೆ. ಅಂಥ ಕಲ್ಲಿದ್ದಲನ್ನು ಕೆಪಿಸಿಎಲ್‌ನ ಥರ್ಮಲ್ ಪವರ್ ಸ್ಟೇಷನ್‌ಗಳಲ್ಲಿ ಬಳಸಲಾಗಿರುತ್ತದೆ. ಕೆಇಎಂಟಿಎ ವಿರುದ್ಧ ವಾಷಿಂಗ್ ಚಾರ್ಜ್‌ಗಳಿಗೆ ಸಂಬಂಧಿಸಿದಂತೆ ಪ್ರತಿ ಮೆಟ್ರಿಕ್ ಟನ್‌ಗೆ ಕೇವಲ ೯೦ ರೂ.ಗಳ (ತೊಂಬತ್ತು) ಕಡಿತದ ನಿರ್ಧಾರವನ್ನು ಏಕಪಕ್ಷೀಯವಾಗಿ ತೆಗೆದುಕೊಂಡಿರುವುದು ಕೆಪಿಸಿಎಲ್‌ಗೆ ಸಂಬಂಧಿಸಿದಂತೆ ಯುಕ್ತವಾದುದಲ್ಲವೆಂದು ನಾವು ಭಾವಿಸಿರುತ್ತೇವೆ. ಯಾವುದೇ ನ್ಯಾಯ ನಿರ್ಣಯವನ್ನು ಸಕ್ಷಮ ನ್ಯಾಯಿಕ ಪ್ರಾಧಿಕಾರದಿಂದ ಕೈಗೊಳ್ಳಲಾಗಿರುವುದಿಲ್ಲ. ನ್ಯಾಯ ನಿರ್ಣಯ ಮಾಡದಿರುವಲ್ಲಿ, ಅಂಥ ಹಣವನ್ನು ತಡೆಯುವ ಮತ್ತು ಕಡಿತಗೊಳಿಸುವ ವಿಚಾರದ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳುವುದು ಕೆಪಿಸಿಎಲ್‌ಗೆ ಅನುಮತೀಯವಾಗಿರುವುದಿಲ್ಲ.

2016ರ 2997ರಿಂದ 2998ರ ವರೆಗಿನ ರಿಟ್ ಅರ್ಜಿಗಳನ್ನು ಅಂಗೀಕರಿಸಲಾಗಿರುತ್ತದೆ. ಪ್ರತೀ ಮೆಟ್ರಿಕ್ ಟನ್‌ಗೆ ಕೇವಲ ೯೦/– (ತೊಂಬತ್ತು ರೂಪಾಯಿಗಳು ಮಾತ್ರ) ರೂ.ಗಳನ್ನು ಕಡಿತಗೊಳಿಸಬೇಕೆಂದು ಅಧಿಸೂಚಿಸಿದ 2013ರ ನವೆಂಬರ್ 23ರ ಹಾಗೂ 2014ರ ಜನವರಿ 29ರ ಪತ್ರಗಳನ್ನು ರದ್ದುಪಡಿಸಲಾಗಿರುತ್ತದೆ. ತದನುಸಾರವಾಗಿ, ರಿಟ್ ಅರ್ಜಿದಾರರು, 2013ರ ನವೆಂಬರ್ 23ರ ಹಾಗೂ 2014ರ ಜನವರಿ 29ರ ಪತ್ರಗಳಲ್ಲಿ ಸೂಚಿಸಿದಂತೆ ಕೆಪಿಸಿಎಲ್ ಕಡಿತಗೊಳಿಸಿರುವ ಮೊಬಲಗನ್ನು ಹಿಂದಕ್ಕೆ ಪಡೆಯಲು ಹಕ್ಕುಳ್ಳವರಾಗಿರುತ್ತಾರೆಂದು ತೀರ್ಪು ನೀಡಲಾಗಿರುತ್ತದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

1. *(2004)3 ಎಸ್‌ಸಿಸಿ 553*
   *ಎಬಿಎಲ್ ಇಂಟರ್‌ನ್ಯಾಷನಲ್ ಲಿಮಿಟೆಡ್*
   *–ವಿರುದ್ಧ– ಎಕ್ಸ್‌ಪೋರ್ಟ್ ಕ್ರೆಡಿಟ್ ಗ್ಯಾರಂಟಿ*
   *ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ (ಉಲ್ಲೇ) 19*

2 *(2009) 1 ಎಸ್‌ಸಿಸಿ 150*
*ಕರ್ನಾಟಕ ಸ್ಟೇಟ್ ಫಾರೆಸ್ಟ್ ಇಂಡಸ್ಟ್ರೀಸ್*
*ಕಾರ್ಪೊರೇಷನ್ -ವಿರುದ್ಧ- ಇಂಡಿಯನ್ ರಾಕ್ಸ್* *(ಉಲ್ಲೇ) 19*

3. *(1989) 3 ಎಸ್‌ಸಿಸಿ 293*
*ದ್ವಾರಕದಾಸ್ ಮರ್ಫಾತೀಯ ಅಂಡ್ ಸನ್ಸ್*
*-ವಿರುದ್ಧ - ಬೋರ್ಡ್ ಆಫ್ ಟ್ರಸ್ಟೀಸ್ ಆಫ್*
*ದ ಪೋರ್ಟ್ ಆಫ್ ಬಾಂಬೆ* *(ಉಲ್ಲೇ) 22*

4. *(1993) 1 ಎಸ್‌ಸಿಸಿ 71*
*ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ*
*-ವಿರುದ್ಧ- ಕಾಮಧೇನು ಕ್ಯಾಟಲ್ ಫೀಡ್ ಇಂಡಸ್ಟ್ರೀಸ್* *(ಉಲ್ಲೇ) 23*

5. *ಎಐಆರ್ 1974 ಎಸ್‌ಸಿ 1265*
*ಯೂನಿಯನ್ ಆಫ್ ಇಂಡಿಯಾ -ವಿರುದ್ಧ-*
*ರಾಮನ್ ಐರನ್ ಫೌಂಡರಿ* *(ಉಲ್ಲೇ) 30*

6. *(2013)7 ಎಸ್‌ಸಿಸಿ 1*
*ಅರುಣ ಕುಮಾರ್ ಅಗರವಾಲ್ -ವಿರುದ್ಧ-*
*ಯೂನಿಯನ್ ಆಫ್ ಇಂಡಿಯಾ* *(ಉಲ್ಲೇ) 33*

7. *(2014) 4 ಎಸ್‌ಸಿಸಿ 156*
*ಪಠಾಣ್ ಮೊಹಮದ್ ಸುಲೇಮಾನ್*
*ರೆಹಮತ್‌ಖಾನ್ -ವಿರುದ್ಧ- ಗುಜರಾತ್ ಸರ್ಕಾರ* *(ಉಲ್ಲೇ) 34*

ಅರ್ಜಿದಾರರ ಪರ: ಕುಮಾರಿ ನಳಿನಿ ಮಾಯೇಗೌಡ ವಕೀಲರು, ಮೆ॥ ಪೂವಯ್ಯ ಅಂಡ್ ಕಂಪನಿ ಪರವಾಗಿ ಶ್ರೀ ಸಜನ್ ಪೂವಯ್ಯ, ಹಿರಿಯ ವಕೀಲರು,
ಪ್ರತ್ಯರ್ಜಿದಾರರ ಪರ: ಶ್ರೀ ಅಜಯ್ ಜೆ. ನಂದಲಿಕೆ, ವಕೀಲರು.

## ಆಜ್ಞೆ

**ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ರೊ ಕಮಲ್ ಮುಖರ್ಜಿ:**

2016ರ ರಿಟ್ ಅರ್ಜಿ ಸಂಖ್ಯೆ 2995 ರಿಂದ 2996 ಹಾಗೂ 2016ರ ರಿಟ್ ಅರ್ಜಿ ಸಂಖ್ಯೆ 2997 ರಿಂದ 2998ನ್ನು, ಎರಡೂ ವಿಷಯಗಳಲ್ಲಿ ಒಳಗೊಂಡಿರುವ ವಾಸ್ತವಾಂಶದ ಹಾಗೂ ಕಾನೂನಿನ ಪ್ರಶ್ನೆಗಳು ಒಂದೇ ತೆರನಾಗಿರುವುದರಿಂದ ಒಟ್ಟಿಗೆ ಪರಿಗಣಿಸಲಾಗಿರುತ್ತದೆ.

2. ಈ ರಿಟ್ ಅರ್ಜಿಗಳನ್ನು ಸಲ್ಲಿಸುವ ಮೂಲಕ, ರಿಟ್ ಅರ್ಜಿದಾರರು, ಕರ್ನಾಟಕ ರಾಜ್ಯದಲ್ಲಿನ ಕೆಪಿಸಿಎಲ್‌ನ ಥರ್ಮಲ್ ಪವರ್ ಪ್ರಾಜೆಕ್ಟ್‌ಗಳಿಗೆ ಸಂಬಂಧಿಸಿದಂತೆ ಕಲ್ಲಿದ್ದಲಿನ ಖರೀದಿಗೆ ಸಂಬಂಧಿಸಿದಂತೆ ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ನಿಯಮಿತ (ಸಂಕ್ಷಿಪ್ತವಾಗಿ ಇನ್ನು ಮುಂದೆ ಕೆಪಿಸಿಎಲ್ ಎಂದು ಕರೆಯಲಾಗಿರುತ್ತದೆ)ದ ಮೂಲಕ ತಮ್ಮ ವಿರುದ್ಧ ನೀಡಿರುವ ಪ್ರತಿಕೂಲ ತೀರ್ಪುಗಳನ್ನು ಪ್ರಶ್ನಿಸಿರುತ್ತಾರೆ.

3. ಈ ರಿಟ್ ಅರ್ಜಿಗಳನ್ನು ನಿರ್ದಿಷ್ಟಪಡಿಸುವುದಕ್ಕೆ ಸಂಬಂಧಿಸಿದ ಪರಿಗಣನೆಗಾಗಿನ ವಾಸ್ತವಾಂಶಗಳನ್ನು ಈ ಮುಂದಿನಂತೆ ಸಂಕ್ಷಿಪ್ತಗೊಳಿಸಿದೆ:

> (ಎ) ಕೆಪಿಸಿಎಲ್‌ಗೆ ಕರ್ನಾಟಕ ರಾಜ್ಯದಲ್ಲಿ, ತನ್ನ ಥರ್ಮಲ್ ಪವರ್ ಪ್ರಾಜೆಕ್ಟ್‌ಗಳಲ್ಲಿ ಕಲ್ಲಿದ್ದಲಿನ ನಿರ್ಬಂಧಿತ ಬಳಕೆಗೆ ಸಂಬಂಧಿಸಿದಂತೆ ಭಾರತ ಸರ್ಕಾರದಿಂದ ಕೆಲವು ಕಲ್ಲಿದ್ದಲು ಗಣಿಗಳನ್ನು ಹಂಚಿಕೆ ಮಾಡಲಾಗಿರುತ್ತದೆ.
>
> (ಬಿ) 2002ನೇ ವರ್ಷದಲ್ಲಿನ ಟೆಂಡರ್ ಕಾರ್ಯ ವಿಧಾನದ ಬಲದಿಂದ, ನಿರ್ಬಂಧಿತ ಗಣಿಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಲ್ಲದೆ, ರಾಜ್ಯದಲ್ಲಿನ ಥರ್ಮಲ್ ಪವರ್

ಪ್ರಾಜೆಕ್ಟ್‌ಗಳಿಗೆ ಸದರಿ ನಿರ್ಬಂಧಿತ ಗಣಿಗಾರಿಕೆಯಿಂದ ಕಲ್ಲಿದ್ದಲಿನ ಪೂರೈಕೆಗೆ ಸಂಬಂಧಿಸಿದಂತೆ ಕೆಪಿಸಿಎಲ್, ಇಎಂಟಿಎ ಕೋಲ್ ಲಿಮಿಟೆಡ್ ಅನ್ನು ಆಯ್ಕೆ ಮಾಡಿಕೊಂಡಿದೆ.

(ಸಿ) 2002ರ ಸೆಪ್ಟೆಂಬರ್ 13 ರಂದು, ಜಂಟಿ ಸಹಯೋಗ ಒಪ್ಪಂದವನ್ನು, ಕಲ್ಲಿದ್ದಲು ಗಣಿಗಳಿಂದ, ಕಲ್ಲಿದ್ದಲಿನ ಗಣಿಗಾರಿಕೆಯ ವಿಶೇಷ ಉದ್ದೇಶದೊಂದಿಗೆ, ಕೆಪಿಸಿಎಲ್ ಮತ್ತು ಇಎಂಟಿಎ ಗಳ ಮೂಲಕ ಹಾಗೂ ಅವುಗಳ ನಡುವೆ ಅನುಷ್ಠಾನಗೊಳಿಸಲಾಗಿರುತ್ತದೆ. ಹಾಗಾಗಿ, ಕರ್ನಾಟಕ ಇಎಂಟಿಎ ಕಲ್ಲಿದ್ದಲು ಗಣಿಗಾರಿಕೆ ಲಿಮಿಟೆಡ್ (ಸಂಕ್ಷಿಪ್ತವಾಗಿ 'ಕೆಇಎಂಟಿಎ' ಎಂದು ಕರೆಯಲಾಗಿರುತ್ತದೆ) ಅನ್ನು ರೂಪಿಸಲಾಗಿರುತ್ತದೆ.

(ಡಿ) 2003ನೇ ವರ್ಷದಲ್ಲಿ ಕೆಪಿಸಿಎಲ್ ನಿರ್ಬಂಧಿತ ಕಲ್ಲಿದ್ದಲು ಬ್ಲಾಕ್‌ಗಳ ಹಂಚಿಕೆಯ ತರುವಾಯ, ವಿವಿಧ ತೀರುವಳಿಯನ್ನು ಪಡೆದ ಮೇಲೆ, ಇಂಧನ ಪೂರೈಕೆ ಒಪ್ಪಂದವನ್ನು 2007ರ ಮೇ 9 ರಂದು ಕೆಪಿಸಿಎಲ್ ಮತ್ತು ಕೆಇಎಂಟಿಎ ಗಳ ಮೂಲಕ ಹಾಗೂ ಅವುಗಳ ನಡುವೆ ಕಾರ್ಯರೂಪಗೊಳಿಸಲಾಯಿತು.

(ಇ) ಅಂಥ ಇಂಧನ ಪೂರೈಕೆ ಒಪ್ಪಂದವನ್ನು ಮಾಡಿಕೊಳ್ಳುವ ಉದ್ದೇಶವು, ರಾಜ್ಯದಲ್ಲಿನ ಕೆಪಿಸಿಎಲ್‌ನ ಥರ್ಮಲ್ ಪವರ್ ಸ್ಟೇಷನ್‌ಗಳಿಗೆ ನಿರ್ಬಂಧಿತ ಕಲ್ಲಿದ್ದಲಿನ ಬ್ಲಾಕುಗಳಾದ ಕಲ್ಲಿದ್ದಲ್ಲನ್ನು ಪೂರೈಕೆ ಮಾಡುವುದು ಮತ್ತು ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದ್ದಾಗಿರುತ್ತದೆ.

(ಎಫ್) 2007ರ ಸದರಿ ಮೇ 9 ರಂದು, ಮೇಲೆ ಹೇಳಿದಂತೆ 2002ರ ಸೆಪ್ಟೆಂಬರ್ 13 ರಂದು ಜಂಟಿ ಸಹಯೋಗದ ಒಪ್ಪಂದದ

ಉಪಬಂಧಗಳನ್ನು ಅನುಷ್ಠಾನಗೊಳಿಸಲು ಇಎಂಟಿಎ ಮತ್ತು ಕೆಇಎಂಟಿಎಗಳ ನಡುವೆ ಮತ್ತೊಂದು ಒಪ್ಪಂದವನ್ನು ಮಾಡಿಕೊಳ್ಳಲಾಗಿರುತ್ತದೆ.

(ಜಿ) ತರುವಾಯ, ಕರ್ನಾಟಕ ರಾಜ್ಯದಲ್ಲಿ ರಾಜ್ಯದ ಥರ್ಮಲ್ ಪವರ್ ಸ್ಟೇಷನ್‌ಗಳ ಬಳಕೆಗಾಗಿ, ನಿರ್ಬಂಧಿತ ಕಲ್ಲಿದ್ದಲು ಬ್ಲಾಕ್‌ಗಳ ಅಭಿವೃದ್ಧಿ ಹಾಗೂ ಕೆಪಿಸಿಎಲ್‌ಗೆ ಕಲ್ಲಿದ್ದಲಿನ ಪೂರೈಕೆಗೆ ಸಂಬಂಧಿಸಿದಂತೆ ಹಾಗೂ ಇತರ ವಿಷಯಗಳೊಂದಿಗೆ ಕೆಪಿಸಿಎಲ್, ಇಎಂಟಿಎ ಮತ್ತು ಕೆಇಎಂಟಿಎ ಗಳ ನಡುವೆ ತ್ರಿಪಕ್ಷೀಯ ಸಂಬಂಧವನ್ನು ಸ್ಥಾಪಿಸಲಾಗಿರುತ್ತದೆ.

(ಹೆಚ್) ಅಂಥ ಒಪ್ಪಂದಗಳ ಮುಂದುವರಿಕೆಯಲ್ಲಿ ಇಎಂಟಿಎ, ಮೇಲೆ ಹೇಳಿದ ತ್ರಿಪಕ್ಷೀಯ ಒಪ್ಪಂದದ ನಿರೂಪಣೆಯಲ್ಲಿ ಇಎಂಟಿಎ ಮತ್ತು ಕೆಇಎಂಟಿಎಗಳ ಹೊಣೆಗಾರಿಕೆಯ ಖಾತರಿಗೆ ಹಣದ ವಿವಿಧ ಮೊಬಲಗುಗಳನ್ನು ಒಳಗೊಳ್ಳುವ ಹಲವಾರು ಬ್ಯಾಂಕ್ ಖಾತರಿಗಳನ್ನು ಕಾರ್ಯರೂಪಗೊಳಿಸುತ್ತದೆ.

(ಐ) ತ್ರಿಪಕ್ಷೀಯ ಒಪ್ಪಂದದ ಎಲ್ಲಾ ಪಕ್ಷಕಾರರು ನಿರ್ಬಂಧಿತ ಕಲ್ಲಿದ್ದಲು ಬ್ಲಾಕುಗಳಿಂದ ಕೆಪಿಸಿಎಲ್‌ಗೆ ಕಲ್ಲಿದ್ದಲನ್ನು ಪೂರೈಕೆ ಮಾಡಲು ಮುಂಚೂಣಿಯಲ್ಲಿರುವ ವಿವಿಧ ಗುತ್ತಿಗೆಗಳಡಿಯಲ್ಲಿ ತಮ್ಮ ಹೊಣೆಗಾರಿಕೆಗಳನ್ನು ಸಮರ್ಥವಾಗಿ ಹಾಗೂ ಯಶಸ್ವಿಯಾಗಿ ಕಾರ್ಯರೂಪಗೊಳಿಸಿರುತ್ತದೆ.

(ಜೆ) 2013ರ ಮಾರ್ಚ್ ಕೊನೆಯ ಮೇರೆಗೆ ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರು (ಇನ್ನು ಮುಂದೆ ಸಿಎಜಿ ಎಂದು ಸಂಕ್ಷಿಪ್ತವಾಗಿ

ಕರೆಯಲಾಗಿರುತ್ತದೆ) ವರದಿಯನ್ನು ಸಲ್ಲಿಸುವವರೆಗೆ ಪಕ್ಷಕಾರರ ನಡುವೆ ಎಂದಿಗೂ ಯಾವುದೇ ವಿವಾದಬೆಳೆದಿರುವುದಿಲ್ಲವೆಂದು ನಮಗೆ ದಾಖಲೆಗಳಿಂದ ಕಂಡುಬಂದಿರುವುದಿಲ್ಲ.

(ಕೆ) 2008–09 ಹಾಗೂ 2012ರ ಜೂನ್‌ರ ನಡುವೆ ಓಪನ್ ಕಾಸ್ಟ್– ಮೈನ್ಸ್ ಒಂದರಿಂದಲೇ ಬಿಟ್ಟು ಕಲ್ಲಿದ್ದಲು ಉತ್ಪಾದನೆಯು 82.78ಲಕ್ಷ ಮೆಟ್ರಿಕ್ ಟನ್‌ಗಳು ಎಂಬುದನ್ನು ಸಿಎಜಿಯು ಸದರಿ ವರದಿಯಲ್ಲಿ ಗಮನಿಸಿರುತ್ತದೆ. ಮುಂದುವರೆದು, ಕಲ್ಲಿದ್ದಲಿನ ಕನಿಷ್ಠ ಪ್ರಮಾಣವನ್ನು 8.28ಲಕ್ಷ ಮೆಟ್ರಿಕ್ ಟನ್ ಪ್ರಮಾಣದ ಒಟ್ಟು ಉತ್ಪಾದನೆಯು ಶೇ.10ರಷ್ಟನ್ನು ತಿರಸ್ಕರಿಸಲಾಗಿರುತ್ತದೆಂಬುದನ್ನು ಗಮನಿಸಲಾಗಿರುತ್ತದೆ.

(ಎಲ್) ಕೆಇಎಂಟಿಎ ಮತ್ತು ಗುಪ್ತಾ ಕೋಲ್ ಫೀಲ್ಡ್ಸ್ ಅಂಡ್ ವಾಷರೀಸ್ ಲಿಮಿಟೆಡ್ ನಡುವೆ ಕಾರ್ಯರೂಪಗೊಳಿಸಿದ ತಿಳುವಳಿಕೆ ಪತ್ರವನ್ನು ಆಧರಿಸಿ, ಸಿಎಜಿಯು ಪರಿಮಾಣೀಕರಣ ಮಾಡಿರುತ್ತದೆ. ಸದರಿ ವಾಷರಿಯು, ಗಣಿಗಾರಿಕೆಗಳಿಂದ ತೆಗೆದ ಕಲ್ಲಿದ್ದಲಿಗೆ ವಾಷಿಂಗ್ ಸೇವೆಯನ್ನು ಒದಗಿಸಿರುತ್ತದೆ.

(ಎಂ) ಸಿಎಜಿಯು, ತೊಳೆದ ಒಟ್ಟು ಕಲ್ಲಿದ್ದಲು ಶೇ.10ರ ವರೆಗೆ ತಿರಸ್ಕರಿಸಲ್ಪಡುತ್ತದೆಂಬುದನ್ನು ತಿಳುವಳಿಕೆ ಪತ್ರವು ನಿರ್ದಿಷ್ಟವಾಗಿ ಒಳಗೊಂಡಿರುತ್ತದೆಂಬುದನ್ನು ಗಮನಿಸಿರುತ್ತದೆ. ಅದರ ಆಧಾರದ ಮೇಲೆ ಸಿಎಜಿಯು 8.28 ಲಕ್ಷ ಮೆಟ್ರಿಕ್ ಟನ್‌ಗಳ ಪರಿಮಾಣೀಕರಣವನ್ನು ಮಾಡಲಾಗಿರುತ್ತದೆ. ಸಿಎಜಿಯು 52,37,00,000/– (ಐವತ್ತೆರಡು ಕೋಟಿ ಮುವತ್ತೇಳು ಲಕ್ಷ ರೂ.ಗಳು ಮಾತ್ರ) ಗಳೆಂದು ಮೌಲ್ಯಮಾಪನ ಮಾಡಿರುತ್ತದೆ.

(ಎನ್) ಸಿಎಜಿ ವರದಿಗೆ ಪ್ರತಿಯಾಗಿ, ಕೆಪಿಸಿಎಲ್, 2013ರ 17ನೇ ಡಿಸೆಂಬರ್ ರಂದು ಲೆಕ್ಕ ಪರಿಶೋಧನೆಯ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತದೆ. 2013ರ ಡಿಸೆಂಬರ್ 17 ರಂದಿನ ಸದರಿ ಆಕ್ಷೇಪಣೆಗಳಲ್ಲಿ, ಕೆಪಿಸಿಎಲ್ ತಿರಸ್ಕರಣೆಯ ಮೌಲ್ಯಮಾಪನವು ದೋಷಪೂರ್ಣವಾಗಿದೆಯೆಂದು ಒತ್ತಿ ಹೇಳಿರುತ್ತದೆ. ಇದು ನಿರ್ದಿಷ್ಟವಾಗಿ ವಾಷರಿ ತಿರಸ್ಕರಣೀಯ ನಿರ್ಧರಣೆಯು ಮುಕ್ತ ಕಾಸ್ಟ್ ಗಣಿಗಾರಿಕೆಯಲ್ಲಿ ಉತ್ಪಾದಿಸಲಾದ ಕಲ್ಲಿದ್ದಲಿನ ಪ್ರಮಾಣದೊಂದಿಗೆ, ಯಾವುದೇ ಸಹ ಸಂಬಂಧವನ್ನು ಹೊಂದಿರುವುದಿಲ್ಲವೆಂದು ವಾದಿಸಿರುತ್ತದೆ. ಗಣಿಯಿಂದ ವಾಷರಿಗೆ ಕಳುಹಿಸಿದ ಕಲ್ಲಿದ್ದಲಿನ ಪ್ರಮಾಣವನ್ನು ಆಧರಿಸಿ ತಿರಸ್ಕರಿಸಿದವುಗಳನ್ನು ನಿರ್ಧರಿಸಲೇ ಬೇಕೆಂಬುದನ್ನು ಕೆಪಿಸಿಎಲ್ ನಿರ್ವಹಿಸಿರುತ್ತದೆ ಹಾಗೂ ಒಂದು ಪ್ರಕ್ರಿಯೆಯ ನಂತರ ವಾಸ್ತವವಾಗಿ ಕಲ್ಲಿದ್ದಲಿನ ಒಂದು ಪ್ರಮಾಣವನ್ನು ಥರ್ಮಲ್ ಪವರ್ ಸ್ಟೇಷನ್‌ಗೆ ಕಳುಹಿಸಬೇಕಾಗಿರುತ್ತದೆ. ಕೆಪಿಸಿಎಲ್, ಪ್ರಮಾಣದ ವಿವರಗಳನ್ನು ವರ್ಷವಾರಾಗಿ ಮಾತ್ರ ಒದಗಿಸಿದೆ, 8.28ಲಕ್ಷ ಮೆಟ್ರಿಕ್ ಟನ್‌ಗಳ ಪರಿಮಾಣೀಕರಣವು, ದೋಷಪೂರ್ಣವಾಗಿದೆಯೆಂಬುದನ್ನು ತೋರಿಸಿದೆ. ಕೆಪಿಸಿಎಲ್, ಗಣಿಗಾರಿಕೆ ಕಾರ್ಯಾಚರಣೆಗಳಲ್ಲಿ ತಿರಸ್ಕರಿಸುವಂತೆ ಉತ್ಪಾದನೆಯಾಗುವ ವಸ್ತುಗಳೆಂದರೆ ಕೇವಲ ಕಲ್ಲುಗಳು ಹಾಗೂ ಸಣ್ಣ ಕಲ್ಲುಗಳೆಂಬುದನ್ನು ನಿರ್ವಹಿಸಿದೆ. ತಿರಸ್ಕರಿಸಿದ ವಸ್ತುಗಳು, ಥರ್ಮಲ್ ಪವರ್ ಸ್ಟೇಷನ್‌ಗಳಲ್ಲಿ ಬಳಸಬಹುದಾದಂಥ ಕಲ್ಲಿದ್ದಲಿನ ಗಾತ್ರದೊಂದಿಗೆ ಹೊಂದಿಕೆಯಾಗುವುದಿಲ್ಲ. ಉತ್ತಮ ಗಣಿಗಾರಿಕೆ ಕಾರ್ಯಾಚರಣೆಗಳ ಸೌಲಭ್ಯ ಕಲ್ಪಿಸಲು ಗಣಿಗಳಲ್ಲಿ ಮಟ್ಟಸ ಮಾಡುವ ಹಾಗೂ ಭರ್ತಿ ಮಾಡುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಎಲ್ಲಾ ತಿರಸ್ಕೃತ ವಸ್ತುಗಳನ್ನು ಬಳಸಲಾಗುತ್ತದೆಂದು ಕೆಪಿಸಿಎಲ್ ಒಪ್ಪಿಕೊಂಡಿರುತ್ತದೆ.

(ಒ) ಆದ್ದರಿಂದ, ಲೆಕ್ಕಪರಿಶೋಧನಾ ವರದಿಯನ್ನು ಮಧ್ಯಸ್ಥಿಕೆದಾರರಿಂದ ಪ್ರಶ್ನಿಸಲಾಗಿದ್ದು, ಭೂ ವೈಜ್ಞಾನಿಕ ವಾಸ್ತವಾಂಶಗಳನ್ನು ಆಧರಿಸಿರುವುದಿಲ್ಲ. ಮುಂದುವರೆದು ಯಾವುದೇ ಇತರ ಸ್ಥಳಕ್ಕೆ ಅಂಥ ತಿರಸ್ಕರಣೆಯನ್ನು ಸಾಗಿಸಿದಾಗ ಮಾತ್ರ ಕೆಪಿಸಿಎಲ್ ಮೇಲೆ ಹೆಚ್ಚುವರಿ ಹೊರೆಯನ್ನು ವಿಧಿಸಲಾಗುತ್ತದೆ. ಆದ್ದರಿಂದ ತಿರಸ್ಕರಿಸಿದ ವಸ್ತುಗಳನ್ನು ಗಣಿಗಳಲ್ಲಿ ಮಟ್ಟಸ ಮಾಡುವ ಹಾಗೂ ಭರ್ತಿ ಮಾಡುವ ಚಟುವಟಿಕೆಗಳಿಗೆ ಬಿಟ್ಟು ಕೊಡಲಾಗುತ್ತದೆ ಅಥವಾ ಬಳಸಿಕೊಳ್ಳಲಾಗುತ್ತದೆಂದು ವಾದ ಮಾಡಲಾಗಿರುತ್ತದೆ.

(ಪಿ) ಅಂಥ ಲೆಕ್ಕಪರಿಶೋಧನೆಯ ಆಕ್ಷೇಪಣೆಗೆ ಬದಲಾಗಿ ಸಿಎಜಿ ವರದಿಯನ್ನು ಸಿದ್ಧಪಡಿಸಿ, ಇದನ್ನು ಕೆಪಿಸಿಎಲ್‌ಗೆ ಲಭ್ಯವಾಗುವಂತೆ ಮಾಡುತ್ತದೆ.

(ಕ್ಯೂ) ಕೆಪಿಸಿಎಲ್ ನಿರ್ದೇಶಕ ಮಂಡಳಿಯು, ಕೆಇಎಂಟಿಎ ಯಿಂದ ತಿರಸ್ಕರಿಸಲಾದ ವೆಚ್ಚದ ತಗಾದೆಯನ್ನು ಹಿಂಪಡೆಯುವುದಕ್ಕೆ ಏಕ ಪಕ್ಷೀಯವಾಗಿ ನಿರ್ಧರಿಸಿರುತ್ತದೆ. ಮೊದಲ ತಗಾದೆಯನ್ನು 2014ರ ಜುಲೈ 31ರಂದಿನ ಪತ್ರದ ಮೂಲಕವೂ, ಎರಡನೇ ತಗಾದೆಯನ್ನು 2014ರ ಡಿಸೆಂಬರ್ 24ರಂದಿನ ಪತ್ರದ ಮೂಲಕವೂ ಕಳುಹಿಸಿರುತ್ತದೆ. ಆದ್ದರಿಂದ ಕೆಪಿಸಿಎಲ್, ಕೆಇಎಂಟಿಎ ಯಿಂದ ಸಿಎಜಿಯ ವರದಿಯ ನಿರೂಪಣೆಯಲ್ಲಿ ತಿರಸ್ಕರಣೆಯ ವೆಚ್ಚವಾಗಿ 52,37,00,000/– (ಐವತ್ತೆರಡು ಕೋಟಿ ಮುವತ್ತೇಳು ಲಕ್ಷ ರೂಪಾಯಿಗಳು ಮಾತ್ರ) ರೂ.ಗಳನ್ನು ಹಿಂದಕ್ಕೆ ಪಡೆಯಲು ತಗಾದೆ ಮಾಡಿರುತ್ತದೆ. ಸಂದಾಯ ಮಾಡಲು ತಪ್ಪಿದಲ್ಲಿ, ವಸೂಲಿಯನ್ನು ಕೆಇಎಂಬಿಎಯ ಚಾಲ್ತಿ ಬಿಲ್ಲುಗಳಿಂದ ಆರಂಭಿಸಲಾಗುತ್ತದೆಂದು ಬೆದರಿಸಿರುತ್ತದೆ.

(ಆರ್) ಕೆಪಿಸಿಎಲ್‌ನ ತಗಾದೆಗಳನ್ನು ರಿಟ್ ಅರ್ಜಿ ಸಂ.2016ರ 2995ರಿಂದ 2996ರಲ್ಲಿ ನಿರಂಕುಶ ಮತ್ತು ಕಾನೂನುಬಾಹಿರವೆಂದು ಟೀಕಿಸಲಾಗಿರುತ್ತದೆ.

4. 2002ರ ಸೆಪ್ಟೆಂಬರ್ 13ರ ಜಂಟಿ ಸಹಯೋಗದ ಒಪ್ಪಂದ ಹಾಗೂ 2007ರ ಮೇ 9ರ ಇಂಧನ ಒಪ್ಪಂದಗಳಡಿಯಲ್ಲಿ ನಿರ್ದಿಷ್ಟ ಕ್ಯಾಲೊರಿಫಿಕ್ ಮೌಲ್ಯದ ಕಲ್ಲಿದ್ದಲನ್ನು ನಿರ್ಬಂಧಿತ ಗಣಿಗಳಿಂದ ಕೆಪಿಸಿಎಲ್‌ಗೆ ಪೂರೈಸಬೇಕಾಗಿರುತ್ತಿತ್ತು.

5. ಅಲ್ಲದೆ, ಇಂಧನ ಪೂರೈಕೆ ಒಪ್ಪಂದವು, ಕರಾರಿನಲ್ಲಿ ನಿರ್ದಿಷ್ಟಪಡಿಸಿದ ಖಾತರಿ ನೀಡಿದ ಮೌಲ್ಯಗಳಿಗೆ ಹೋಲಿಕೆ ಮಾಡಿದ ಪೂರೈಸಲಾದ ಕಲ್ಲಿದ್ದಲಿನ ವಸ್ತುಗಳಲ್ಲಿನ ವ್ಯತ್ಯಾಸವನ್ನು ಆಧರಿಸಿ ಬೆಲೆ ಹೊಂದಾಣಿಕೆಗಳನ್ನು ಉದ್ದೇಶಿಸಬಹುದಾಗಿರುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಬೆಲೆ ಹೊಂದಾಣಿಕೆಯನ್ನು ಕ್ರಾಸ್ ಮಾಡಿದ ಕ್ಯಾಲೊರಿಫಿಕ್ ಮೌಲ್ಯ, ಬೂದಿ ಪ್ರಮಾಣ, ಗಾತ್ರ, ಆರ್ದತೆಯ ಪ್ರಮಾಣಗಳಲ್ಲಿನ ವ್ಯತ್ಯಾಸವನ್ನು ಆಧರಿಸಿ ಕೈಗೊಳ್ಳಲಾಗುತ್ತದೆ.

6. ಕಡಿತಗಳನ್ನು ಇತರೆ ಚಟುವಟಿಕೆಗಳನ್ನು ಆಧರಿಸಿ ಮಾಡಲಾಗಿರುತ್ತದೆಂದು ಜಂಟಿ ಸಹಯೋಗ ಒಪ್ಪಂದದಿಂದಾಗಲೀ ಅಥವಾ ಇಂಧನ ಪೂರೈಕೆ ಒಪ್ಪಂದದಿಂದಾಗಲೀ ಯಾವುದೇ ಷರತ್ತುಗಳಿರುವುದು ನಮಗೆ ಕಂಡು ಬಂದಿರುವುದಿಲ್ಲ. ಜಂಟಿ ಸಹಯೋಗ ಒಪ್ಪಂದದಲ್ಲಿ ಮತ್ತು ಇಂಧನ ಪೂರೈಕೆ ಒಪ್ಪಂದಗಳಲ್ಲಿ ಕಲ್ಲಿದ್ದಲು ತೊಳೆಯುವ ದರಗಳಿಗೆ ಇಲ್ಲವೇ ವಾಷರಿಯಲ್ಲಿ ಕಲ್ಲಿದ್ದಲನ್ನು ತೊಳೆದಿರುವುದಿಲ್ಲವೆಂಬ ಆಧಾರದ ಮೇಲೆ ಸಂದಾಯ ಮಾಡದಿರಬಹುದಾದ ಕಲ್ಲಿದ್ದಲ ಬೆಲೆಯಿಂದ ಯಾವುದೇ ಕಡಿತಗಳನ್ನು ಉಪಬಂಧಿಸಿದ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಪ್ರತೀ ಮೆಟ್ರಿಕ್ ಟನ್‌ಗೆ ಕೇವಲ 90 ರೂ.ಗಳನ್ನು ಭರಿಸಬಹುದೆಂಬುದನ್ನು ಎಲ್ಲಿಯೂ ಸೂಚಿಸಿರುವುದಿಲ್ಲ.

7. ರಿಟ್ ಅರ್ಜಿದಾರರು, ಮೂರನೇ ಪಕ್ಷಕಾರರಾದ ವಾಷರಿಯಲ್ಲಿ, ಆರಂಭದಲ್ಲಿ ಕಲ್ಲಿದ್ದಲ್ಲನ್ನು ತೊಳೆದಿದ್ದಾಗ್ಯೂ, ಗಣಿಯಲ್ಲಿ ಡ್ರೈವಾಷಿಂಗ್ ಸೌಲಭ್ಯಗಳ ಅವಕಾಶ ಇರುವುದರಿಂದ, ಕಲ್ಲಿದ್ದಲನ್ನು ಗಣಿಯಲ್ಲಿ ಡ್ರೈವಾಷ್ ಮಾಡಿ, ಕೆಪಿಸಿಎಲ್‌ಗೆ ಪೂರೈಸಲಾಗಿರುತ್ತದೆಂದು ವಾದಿಸಿರುತ್ತಾರೆ.

8. ಕೆಪಿಸಿಎಲ್, ತನಗೆ ಪೂರೈಸಿರುವ ಕಲ್ಲಿದ್ದಲು ಕ್ಯಾಲೋರಿಫಿಕ್ ಮೌಲ್ಯವನ್ನು ಹಾಗೂ ಇಂಧನ ಪೂರೈಕೆ ಕರಾರಿನಲ್ಲಿ ಉಪಬಂಧಸಿದ ಇತರೆ ಮಾನಕಗಳನ್ನು ಭರಿಸಿರುವುದಿಲ್ಲವೆಂದು ಎಂದಿಗೂ ವಾದಿಸಿರುವುದಿಲ್ಲ. ವಾಸ್ತವವಾಗಿ ಪೂರೈಕೆಯನ್ನು, ಕೆಪಿಸಿಎಲ್ ತನ್ನ ಥರ್ಮಲ್ ಪವರ್ ಸ್ಟೇಷನ್‌ಗಳಲ್ಲಿ ಯಾವುದೇ ಡೆಮ್ಯೂರ್ ಇಲ್ಲದೆ ಅದು ಬಳಸಿಕೊಳ್ಳುತ್ತಿದೆ.

9. ಆದಾಗ್ಯೂ, 2013ರ ನವೆಂಬರ್ 23ರಂದು, ಕೆಇಎಂಟಿಎ ಮತ್ತು ಮೂರನೇ ಪಕ್ಷಕಾರರು ಜಾರಿಗೆ ತಂದಿರುವ ತಿಳುವಳಿಕೆ ಪತ್ರದಲ್ಲಿ ಸೂಚಿಸಿರುವ ದರಗಳನ್ನು ಆಧರಿಸಿ ಕಲ್ಲಿದ್ದಲನ್ನು ತೊಳೆಯದಿರುವುದಕ್ಕೆ ಸಂಬಂಧಿಸಿದಂತೆ ಪ್ರತೀ ಮೆಟ್ರಿಕ್ ಟನ್‌ಗೆ ಕೆಪಿಸಿಎಲ್ ಕೇವಲ 90 (ತೊಂಭತ್ತು ರೂಪಾಯಿಗಳು ಮಾತ್ರ) ರೂ.ಗಳನ್ನು ಕಳೆದಿರುತ್ತದೆಂದು ಕೆಇಎಂಟಿಎ ಗೆ ಸೂಚಿಸಲಾಗಿರುತ್ತದೆ.

10. ರಿಟ್ ಅರ್ಜಿದಾರರು, ತಿಳುವಳಿಕೆ ಪತ್ರಕ್ಕೆ ಕೆಪಿಸಿಎಲ್, ಇಎಂಟಿಎ ಮತ್ತು ಕೆಇಎಂಟಿಎ ಇವುಗಳ ನಡುವೆ ಜಾರಿಗೊಳಿಸಿದ ಜಂಟಿ ಸಹಯೋಗ ಒಪ್ಪಂದ ಪತ್ರ ಇಲ್ಲವೆ ಇಂಧನ ಪೂರೈಕೆ ಒಪ್ಪಂದ ಪತ್ರಕ್ಕೆ ಯಾವುದೇ ಪ್ರಸ್ತುತತೆ ಇರುವುದಿಲ್ಲವೆಂದು ವಾದಿಸಿರುತ್ತಾರೆ.

11. ಕೆಪಿಸಿಎಲ್, 2014ನೇ ಜನವರಿ 29ರಂದು ತೊಳೆಯುವ ದರಗಳಿಗೆ ಸಂಬಂಧಿಸಿದಂತೆ ಪ್ರತೀ ಮೆಟ್ರಿಕ್ ಟನ್‌ಗೆ ಕೇವಲ 90/– (ತೊಂಬತ್ತು ರೂಪಾಯಿಗಳು ಮಾತ್ರ) ರೂ.ಗಳನ್ನು ಕಡಿತಗೊಳಿಸುವುದನ್ನು ಮುಂದುವರಿಸಬೇಕೆಂದು ಪುನರುಚ್ಚರಿಸಿದೆ. ರಿಟ್ ಅರ್ಜಿದಾರರು ಕೆಪಿಸಿಎಲ್‌ನ ಇಂಥ ಕ್ರಮಗಳು ಅಸಂಬದ್ಧವಾದುದು ನಿರಂಕುಶವಾದುದು ಮತ್ತು ಕಾನೂನು ಬಾಹಿರವಾದುದೆಂದು ವಾದಿಸಿರುತ್ತಾರೆ.

12. ರಿಟ್ ಅರ್ಜಿದಾರರು ಸುಮಾರು 59,78,00,000/– ರೂ.ಗಳನ್ನು ಮಾತ್ರ ಕೆಪಿಸಿಎಲ್‌ನಿಂದ ನಿರಂಕುಶವಾಗಿ ಕಡಿತಗೊಳಿಸಲಾಗುತ್ತದೆಂದು ವಾದಿಸಿರುತ್ತಾರೆ.

13. ಇಎಂಟಿಎ ಯ ಪರವಾಗಿರುವ ಐತೀರ್ಪಿನ ಪತ್ರವು, ಕಲ್ಲಿದ್ದಲನ್ನು ತೊಳೆಯುವುದು ಎಂದರೆ ಸದರಿ ಐತೀರ್ಪಿನ ಪತ್ರಕ್ಕೆ ಅನುಬಂಧ–IIರಲ್ಲಿ ವಿಧಿಸಿದ ಪರಿಮಾಣದ ಮಾನದಂಡಗಳನ್ನು ಪೂರೈಸಿ ಸೌಲಭ್ಯ ಪಡೆದ ಕಲ್ಲಿದ್ದಲು ಎಂಬ ಅರ್ಥವನ್ನು ಪಡೆಯುತ್ತದೆಂಬುದನ್ನು ನಿರ್ದಿಷ್ಟಪಡಿಸುತ್ತದೆ. ಅಲ್ಲದೆ ಮೇಲೆ ಹೇಳಿದ ಇಂಧನ ಪೂರೈಕೆ ಒಪ್ಪಂದವೂ ಸಹ ಕಲ್ಲಿದ್ದಲು ಎಂದರೆ ಅನುಬಂಧ–Iರಲ್ಲಿ ವಿಧಿಸಿದ ಮಾನದಂಡಗಳನ್ನು ಪೂರೈಸಿದಂಥ ತೊಳೆದ ಕಲ್ಲಿದ್ದಲು ಎಂಬರ್ಥವನ್ನು ಸೂಚಿಸುತ್ತದೆ. ಎರಡೂ ಅನುಬಂಧಗಳಲ್ಲಿರುವ ಮಾನದಂಡಗಳು ಗುರುತರವಾದವುಗಳಾಗಿವೆ.

14. ಇಂಧನ ಪೂರೈಕೆ ಒಪ್ಪಂದವು ಕಲ್ಲಿದ್ದಲನ್ನು ತೊಳೆಯುವುದಕ್ಕೆ ಸಂಬಂಧಿಸಿದ ನಿರ್ದಿಷ್ಟ ಪ್ರಕ್ರಿಯೆಯನ್ನು ನಿರ್ದಿಷ್ಟಪಡಿಸಿರುವುದಿಲ್ಲ. ಕಲ್ಲಿದ್ದಲನ್ನು ಅವಶ್ಯಕವಾಗಿ ನೀರಿನಿಂದಲೇ ತೊಳೆಯಬೇಕು ಎಂದೂ ಹೇಳಲಾಗುವುದಿಲ್ಲ. ಇಲ್ಲವೇ ಡ್ರೈವಾಷ್ ಆದ ಕಲ್ಲಿದ್ದಲ್ಲನ್ನು ತೊಳೆದ ಕಲ್ಲಿದ್ದಲೆಂದು ಒಪ್ಪಿಕೊಳ್ಳಲಾಗುವುದಿಲ್ಲ.

15. ವಾಷರೀಸ್‌ಗಳಲ್ಲಿ ನೀರಿನಿಂದ ತೊಳೆಯುವ ಪ್ರಕ್ರಿಯೆಯ ಮೂಲಕವೇ ಅವಶ್ಯಕವಾಗಿ ಕಲ್ಲಿದ್ದಲನ್ನು ತೊಳೆಯಲೇಬೇಕೆಂದು ಆಜ್ಞಾಪಿಸಿರುವಂಥ ಷರತ್ತುಗಳು ಜಂಟಿ ಸಹಯೋಗ ಒಪ್ಪಂದದಲ್ಲಿ ಅಥವಾ ಐತೀರ್ಪಿನ ಪತ್ರದಲ್ಲಿ ನಮಗೆ ಯಾವುದೇ ನಿರ್ದಿಷ್ಟತೆ ಕಂಡು ಬಂದಿರುವುದಿಲ್ಲ. ಕಲ್ಲಿದ್ದಲು ಎಂದರೆ ಅದು ತೊಳೆದ ಕಲ್ಲಿದ್ದಲಾಗಿದ್ದು, ಅಂಥ ಕಲ್ಲಿದ್ದಲಿನ ಗಣಿಗಾರಿಕೆ ಮತ್ತು ತೊಳೆಯುವಿಕೆಯಲ್ಲಿ ಅಳವಡಿಸಿಕೊಳ್ಳಬಹುದಾದಂಥ ಪ್ರಕ್ರಿಯೆಯನ್ನು ಗಣನೆಗೆ ತೆಗೆದುಕೊಳ್ಳದೆ ಕೆಲವು ನಿಗದಿತ ಮಾನದಂಡಗಳನ್ನು ಪೂರೈಸುವುದೆಂದು ಆ ದಾಖಲೆಗಳಲ್ಲಿ ಕಲ್ಲಿದ್ದಲಿನ ಬಗ್ಗೆ ನಮಗಿರುವ ತಿಳುವಳಿಕೆಯನ್ನು ಪರಿಭಾಷಿಸಲಾಗಿರುತ್ತದೆ.

16. ಕೆಇಎಂಟಿಎ ಯು ಪೂರೈಸಿದ ಕಲ್ಲಿದ್ದಲು ಯಾವುದೇ ಮಾನದಂಡಗಳನ್ನು ಪೂರೈಸಿರುವುದಿಲ್ಲವೆಂದು ಕೆಪಿಸಿಎಲ್ ಸದಾ ಆರೋಪಿಸಿರುವುದು ದಾಖಲೆ ಮೇಲಿನ ವಸ್ತುಗಳಿಂದ ನಾವು ಕಂಡುಕೊಂಡಿರುವುದಿಲ್ಲ. ಅದಕ್ಕೆ ವಿರುದ್ಧವಾಗಿ, ರಿಟ್ ಅರ್ಜಿದಾರರು ತಮ್ಮ ಪೂರೈಕೆಯು ಇಂಧನ ಪೂರೈಕೆ ಒಪ್ಪಂದದಲ್ಲಿ ಒಳಗೊಂಡಿರುವ ಮಾನದಂಡಗಳನ್ನು ಭರಿಸಿರುತ್ತದೆಂದು ಒತ್ತಿ ಹೇಳಿರುತ್ತಾರೆ.

17. ಹಾಗಾಗಿ, ರಿಟ್ ಅರ್ಜಿದಾರರು, 2016ರ ರಿಟ್ ಅರ್ಜಿ ಸಂಖ್ಯೆ 2997 ರಿಂದ 2998ರ ವರೆಗಿನ ಅರ್ಜಿಗಳಲ್ಲಿ ವಾಷಿಂಗ್ ದರಗಳಿಗೆ ಸಂಬಂಧಿಸಿದಂತೆ ಕೆಪಿಸಿಎಲ್ ನಿಂದ ಪ್ರತೀ ಮೆಟ್ರಿಕ್ ಟನ್‌ಗೆ ಕೇವಲ 90 ರೂ.ಗಳನ್ನು (ತೊಂಬತ್ತು ರೂಪಾಯಿಗಳು ಮಾತ್ರ) ಮಾತ್ರ ಕಳೆದಿರುವ ತೀರ್ಪನ್ನು ಪ್ರಶ್ನಿಸಿರುತ್ತಾರೆ. ಅವರು 2013ರ ನವೆಂಬರ್ 23 ರಿಂದ 2014ರ ಜನವರಿ 29ರ ವರೆಗಿನ ಪತ್ರಗಳನ್ನು ಪ್ರಶ್ನಿಸಿರುತ್ತಾರೆ.

18. ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ರಿಟ್ ಅರ್ಜಿಗಳ ಊರ್ಜಿತತ್ವವನ್ನು ಪ್ರಶ್ನಿಸಿದಾಗ್ಯೂ, ನಾವು ಆರಂಭದಲ್ಲಿ ಮಾಡಿದ್ದಂಥ ಆಕ್ಷೇಪಣೆಗಳನ್ನು, ಅಂತಿಮ ವಿಚಾರಣೆಯ ಸಮಯದಲ್ಲಿ ಗಂಭೀರವಾಗಿ ವಾದಿಸಲಿಲ್ಲವೆಂಬುದು ನಮ್ಮ ಗಮನಕ್ಕೆ ಬಂದಿರುತ್ತದೆ. ಅದಕ್ಕಿಂತ ಮುಖ್ಯವಾಗಿ, ರಾಜ್ಯದ ವಿರುದ್ಧದ ರಿಟ್ ಅರ್ಜಿಗಳು ಅಥವಾ ರಾಜ್ಯದ ಲಿಖಿತ ಪತ್ರಗಳ ಕರಾರುಜನ್ಯ ಆಪಾದನೆಗಳಿಂದ ಉದ್ಭವಿಸಿದ ವಿವಾದಗಳನ್ನು ಕೂಡ ಊರ್ಜಿತವಾಗಿರುತ್ತವೆ.

19. ***ಎಬಿಎಲ್ ಇಂಟರ್ ನ್ಯಾಷನಲ್ ಲಿಮಿಟೆಡ್ –ವಿರುದ್ಧ– ಎಕ್ಸ್‌ಪೋರ್ಟ್ ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್***[1], ಪ್ರಕರಣದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪನ್ನು ***ಕರ್ನಾಟಕ ಸ್ಟೇಟ್ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ –ವಿರುದ್ಧ– ಇಂಡಿಯನ್ ರಾಕ್ಸ್***[2] ಪ್ರಕರಣದಲ್ಲಿ ಅನುಸರಿಸಿರುವುದನ್ನು ಇಲ್ಲಿ ಉಲ್ಲೇಖಿಸಬಹುದಾಗಿರುತ್ತದೆ.

1. (2004)3 ಎಸ್‌ಸಿಸಿ 553
2. (2009) 1 ಎಸ್‌ಸಿಸಿ 150

20. ರಾಜ್ಯದ ಕ್ರಮವು ನಿರಂಕುಶ ಅಥವಾ ತಾರತಮ್ಯದಿಂದ ಕೂಡಿದಾಗ, ಅದು ಭಾರತ ಸಂವಿಧಾನದ 14ನೇ ಅನುಚ್ಛೇದದ ಉಲ್ಲಂಘನೆಯಾಗುತ್ತದೆಂಬುದು ಇತ್ಯರ್ಥಗೊಂಡ ಕಾನೂನಾಗಿದ್ದಾಗ್ಯೂ, ಸಾಮಾನ್ಯವಾಗಿ ರಿಟ್ ಅಧಿಕಾರ ವ್ಯಾಪ್ತಿಯಲ್ಲಿ ಉಚ್ಚ ನ್ಯಾಯಾಲಯವು ಕರಾರು ಎನ್ನುವಷ್ಟರ ಮಟ್ಟಿಗಿನ ಕರಾರಿನ ನಿಬಂಧನೆಗಳನ್ನು ಜಾರಿಗೊಳಿಸದಿದ್ದಾಗ್ಯೂ ರಿಟ್ ಅರ್ಜಿಯು ಖಂಡಿತವಾಗಿಯೂ ಊರ್ಜಿತವಾಗಿರುತ್ತದೆ.

21. ರಾಜ್ಯದ ಲಿಖಿತದ ರೂಪದಲ್ಲಿರುವ ಕೆಪಿಸಿಎಲ್ ಅನ್ನು ಯುಕ್ತವಾಗಿ ಅಥವಾ ನಿರಂಕುಶ ರೀತಿಯಲ್ಲಿ ನಿರೀಕ್ಷಿಸಬಹುದಾಗಿರುತ್ತದೆ.

22. ***ದ್ವಾರಕದಾಸ್ ಮರ್ಫಾತೀಯ ಅಂಡ್ ಸನ್ಸ್ –ವಿರುದ್ಧ – ಬೋರ್ಡ್ ಆಫ್ ಟ್ರಸ್ಟೀಸ್ ಆಫ್ ದ ಪೋರ್ಟ್ ಆಫ್ ಬಾಂಬೆ***[3], ಪ್ರಕರಣದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವು, ಪ್ರಾಧಿಕಾರದ ಪ್ರತಿಯೊಂದು ಕ್ರಮವು ಕಾನೂನಿನ ನಿಯಮಕ್ಕೆ ಒಳಪಟ್ಟಿರತಕ್ಕದ್ದು ಹಾಗೂ ಕಾರಣದ ಮೂಲಕ ಮಾಹಿತಿಯನ್ನು ನೀಡಿರತಕ್ಕದ್ದೆಂದು ಅಭಿಪ್ರಾಯಪಟ್ಟಿದೆ. ಕರಾರು ಜನ್ಯ ವಿಷಯಗಳಲ್ಲಿಯೂ ಕೂಡ ರಾಜ್ಯದ ಕ್ರಮವು ಯುಕ್ತತೆಯ ಪರೀಕ್ಷೆಗಳನ್ನು ಭರಿಸಲು ವಿಫಲವಾದಲ್ಲಿ ಇದು ಸಂವಿಧಾನ ಬಾಹಿರವಾಗುತ್ತದೆ.

23. ***ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾ –ವಿರುದ್ಧ– ಕಾಮಧೇನು ಕ್ಯಾಟಲ್ ಫೀಡ್ ಇಂಡಸ್ಟ್ರೀಸ್***[4], ಪ್ರಕರಣದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವು, ಕರಾರು ಜನ್ಯವೆಂಬ ಪರಿಧಿಯಲ್ಲಿ, ಎಲ್ಲಾ ಇತರೆ ರಾಜ್ಯ ಕ್ರಮಗಳಲ್ಲಿರುವಂತೆ, ರಾಜ್ಯ ಮತ್ತು ಇದರ ಎಲ್ಲಾ ಅಂಗ ಸಂಸ್ಥೆಗಳು ನಿರಂಕುಶವಲ್ಲದ ಮಹತ್ವಪೂರ್ಣವಾದ ಭಾಗವಾಗಿರುವಂಥ ಸಂವಿಧಾನದ 14ನೇ ಅನುಚ್ಛೇದದ ಅಗತ್ಯತೆಗಳನ್ನು ಇದು ದೃಢೀಕರಿಸಬೇಕೆಂದು ಅಭಿಪ್ರಾಯಪಟ್ಟಿರುತ್ತದೆ.

24. ಎಬಿಎಲ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನಲ್ಲಿ (ಈ ಹಿಂದೆ ಹೇಳಿದ), ಹಣಕಾಸು ಕ್ಲೇಮಿನ ಆನುಷಂಗಿಕ ಪರಿಹಾರವನ್ನು ಒಳಗೊಂಡ ರಿಟ್ ಅರ್ಜಿಯು

3. (1989) 3 ಎಸ್‌ಸಿಸಿ 293

4. (1993) 1 ಎಸ್‌ಸಿಸಿ 71

ಊರ್ಜಿತವಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ. ಆದ್ದರಿಂದ, ರಿಟ್ ಅರ್ಜಿದಾರರು ನಿರಂಕುಶವಾಗಿ ಕಡಿತಗೊಳಿಸಿದಂಥ ಮೊಬಲಗನ್ನು ಹಿಂದಕ್ಕೆ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

25. ಆದ್ದರಿಂದ, ನಾವು, ಈ ರಿಟ್ ಅರ್ಜಿಗಳು ಊರ್ಜಿತವಾಗಿರುತ್ತವೆಂದು ಅಭಿಪ್ರಾಯಪಟ್ಟಿರುತ್ತೇವೆ.

26. ಕೆಪಿಸಿಎಲ್, ಇಎಂಟಿಎ ಮತ್ತು ಕೆಇಎಂಟಿಎ ಗಳ ನಡುವಿನ ಒಪ್ಪಂದವು ತ್ರಿಪಕ್ಷೀಯ ಒಪ್ಪಂದವಾಗಿರುತ್ತದೆ. ಹಾಗೂ ಇದು ಜಂಟಿ ಸಹಯೋಗದ ಒಪ್ಪಂದ, ಇಂಧನ ಪೂರೈಕೆ ಒಪ್ಪಂದ ಹಾಗೂ ಗಣಿಗಾರಿಕೆ ಕಾರ್ಯಾಚರಣೆಯ ಒಪ್ಪಂದಗಳ ರೂಪದಲ್ಲಿದ್ದು, ಇದರಲ್ಲಿ ಬಹು ಆಯಾಮದ ಕರಾರುಗಳ ಒಪ್ಪಂದವಿರುತ್ತದೆಂಬುದು ನಮಗೆ ಕಂಡು ಬಂದಿರುತ್ತದೆ.

27. ಪ್ರತಿ ಮೆಟ್ರಿಕ್ ಟನ್‌ಗೆ ಕೇವಲ 90 ರೂ.ಗಳ (ತೊಂಬತ್ತು ರೂಪಾಯಿಗಳು ಮಾತ್ರ) ಏಕಪಕ್ಷೀಯ ಕಡಿತಕ್ಕೆ ಸಂಬಂಧಿಸಿದಂತೆ, ವಸೂಲಿಯ ಕ್ಲೇಮಿನ ಗುಣಾರ್ಹತೆಗಳ ಸಂಬಂಧವಾಗಿ, ಅಂಥ ಕಡಿತಗಳಿಗೆ ಮುಖ್ಯವಾಗಿ ಅವರ ಕ್ರಮಕ್ಕೆ ಕೆಪಿಸಿಎಲ್‌ನ ಕಡೆಯಿಂದ ಯಾವುದೇ ಮುಖ್ಯವಾದ ಅಂಶಗಳು ನಮಗೆ ಕಂಡು ಬಂದಿರುವುದಿಲ್ಲ. ಪರಿಮಾಣವು ಜಂಟಿ ಸಹಯೋಗದ ಒಪ್ಪಂದ ರೂಪದಲ್ಲಾಗಲೀ ಅಥವಾ ಇಂಧನ ಪೂರೈಕೆ ಒಪ್ಪಂದದ ರೂಪದಲ್ಲಾಗಲೀ ಲಭ್ಯವಾಗಿರುವುದಿಲ್ಲ. ಕಲ್ಲಿದ್ದಲನ್ನು ತೊಳೆಯುವ ಚಟುವಟಿಕೆಯು, ಅವಶ್ಯಕವಾಗಿ ನೀರಿನಿಂದಲೇ ತೊಳೆಯುವ ಸಾಂಪ್ರದಾಯಿಕ ಪ್ರಕ್ರಿಯೆಯೂ ಆಗಿರಬೇಕೆಂಬ ಯಾವುದೇ ಷರತ್ತುಗಳಿರುವುದಿಲ್ಲ.

28. ಇಂಧನ ಪೂರೈಕೆ ಒಪ್ಪಂದವು, ಕಲ್ಲಿದ್ದಲನ್ನು ತೊಳೆಯುವಾಗ ಸಾಂಪ್ರದಾಯಿಕವಾಗಿ ನೀರಿನಿಂದಲಾಗಲೀ ಅಥವಾ ಆಧುನಿಕ ರೂಪವಾದ ಡ್ರೈವಾಷ್ ಪ್ರಕ್ರಿಯೆಯಿಂದಾಗಲೀ, ಯಾವುದೇ ರೂಪದಲ್ಲಿ ತೊಳೆದರೂ, ಅದನ್ನು ಲಕ್ಷಿಸದೆ ಇಂಧನವನ್ನು ಸರಬರಾಜು ಮಾಡಲೇಬೇಕೆಂಬ ಗೊತ್ತುಪಡಿಸಿದ ಮಾನದಂಡವನ್ನು ಪೂರೈಸಿ ನಿರ್ದಿಷ್ಟಪಡಿಸುತ್ತದೆ.

29. ಕೆಪಿಸಿಎಲ್‌ಗೆ ರಿಟ್ ಅರ್ಜಿದಾರರಿಂದ ಪೂರೈಸಿದ ಕಲ್ಲಿದ್ದಲು, ಇಂಧನ ಪೂರೈಕೆ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ ಮಾನದಂಡಗಳನ್ನು ಭರಿಸುತ್ತದೆ. ಅಂಥ ಕಲ್ಲಿದ್ದಲನ್ನು ಕೆಪಿಸಿಎಲ್‌ನ ಥರ್ಮಲ್ ಪವರ್ ಸ್ಟೇಷನ್‌ಗಳಲ್ಲಿ ಬಳಸಲಾಗಿರುತ್ತದೆ. ಕೆಇಎಂಟಿಎ ವಿರುದ್ಧ ವಾಷಿಂಗ್ ಚಾರ್ಜ್‌ಗಳಿಗೆ ಸಂಬಂಧಿಸಿದಂತೆ ಪ್ರತಿ ಮೆಟ್ರಿಕ್ ಟನ್‌ಗೆ ಕೇವಲ 90 ರೂ.ಗಳ (ತೊಂಬತ್ತು) ಕಡಿತದ ನಿರ್ಧಾರವನ್ನು ಏಕಪಕ್ಷೀಯವಾಗಿ ತೆಗೆದುಕೊಂಡಿರುವುದು ಕೆಪಿಸಿಎಲ್‌ಗೆ ಸಂಬಂಧಿಸಿದಂತೆ ಯುಕ್ತವಾದುದಲ್ಲವೆಂದು ನಾವು ಭಾವಿಸಿರುತ್ತೇವೆ. ಯಾವುದೇ ನ್ಯಾಯ ನಿರ್ಣಯವನ್ನು ಸಕ್ಷಮ ನ್ಯಾಯಿಕ ಪ್ರಾಧಿಕಾರದಿಂದ ಕೈಗೊಳ್ಳಲಾಗಿರುವುದಿಲ್ಲ. ನ್ಯಾಯ ನಿರ್ಣಯ ಮಾಡದಿರುವಲ್ಲಿ, ಅಂಥ ಹಣವನ್ನು ತಡೆಯುವ ಮತ್ತು ಕಡಿತಗೊಳಿಸುವ ವಿಚಾರದ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳುವುದು ಕೆಪಿಸಿಎಲ್‌ಗೆ ಅನುಮತೀಯವಾಗಿರುವುದಿಲ್ಲ.

30. ***ಯೂನಿಯನ್ ಆಫ್ ಇಂಡಿಯಾ –ವಿರುದ್ಧ– ರಾಮನ್ ಐರನ್ ಫೌಂಡರಿ***[5], ಪ್ರಕರಣದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವು, ಹೊಣೆಗಾರಿಕೆಯನ್ನು ನಿರ್ಣಯಿಸುವವರೆಗೆ ಮತ್ತು ಹಾನಿಗಳನ್ನು ಡಿಕ್ರಿ ಅಥವಾ ನ್ಯಾಯಾಲಯದ ಆದೇಶ ಅಥವಾ ಇತರೆ ನ್ಯಾಯ ನಿರ್ಣಯ ಪ್ರಾಧಿಕಾರರು ನಿರ್ಧರಿಸುವವರೆಗೆ, ನಿಗದಿಯಾಗದ ಹಾನಿಗಳಿಗೆ ಸಾಲವನ್ನು ಪಡೆಯಲಾಗುವುದಿಲ್ಲವೆಂಬುದು ಇತ್ಯರ್ಥಗೊಂಡ ಕಾನೂನಾಗಿರುತ್ತದೆಂದು ಗಮನಿಸಲಾಗಿರುತ್ತದೆ. ಒಪ್ಪಂದದ ಉಲ್ಲಂಘನೆಯಾದಾಗ, ಉಲ್ಲಂಘನೆ ಮಾಡಿದಂಥ ಪಕ್ಷಕಾರನು, ಯಾವುದೇ ಆರ್ಥಿಕ ಹೊಣೆಗಾರಿಕೆಯನ್ನು ಭರಿಸುವಂತಿರುವುದಿಲ್ಲ ಇಲ್ಲವೆ ಇತರೆ ಪಕ್ಷಕಾರರಿಂದ ಸಾಲದ ಬಾಕಿಗೆ ಉಲ್ಲಂಘನೆ ಮಾಡಿದಂಥ ಪಕ್ಷಕಾರನು ಹಕ್ಕುಳ್ಳವನಾಗಿರುವುದಿಲ್ಲ. ಗುತ್ತಿಗೆಯ ಉಲ್ಲಂಘನೆಯಿಂದ ಬಾಧಿತನಾದ ವ್ಯಕ್ತಿಗೆ ಇರುವ ಒಂದೇ ಹಕ್ಕೆಂದರೆ ಹಾನಿಗಳಿಗೆ ಸಂಬಂಧಿಸಿದಂತೆ ದಾವೆ ಹೂಡುವುದೇ ಆಗಿರುತ್ತದೆ.

31. ಒಪ್ಪಿಕೊಂಡಂತೆ, ಕೆಪಿಸಿಎಲ್, ಹಾನಿಯನ್ನು ಪರಿಮಾಣೀಕರಿಸುವುದಕ್ಕೆ ಸಂಬಂಧಿಸಿದಂತೆ ನ್ಯಾಯ ನಿರ್ಣಯಕ್ಕಾಗಿನ ಯಾವುದೇ ಕಾರ್ಯ ವಿಧಾನಗಳಿದ್ದಲ್ಲಿ, ಅವುಗಳನ್ನು ಆರಂಭಿಸತಕ್ಕದ್ದಲ್ಲ. ಇಂಧನ ಪೂರೈಕೆ ಒಪ್ಪಂದದ 15ನೇ ಅನುಚ್ಛೇದದಲ್ಲಿ

5. ಎಐಆರ್ 1974 ಎಸ್‌ಸಿ 1265

ನಿರ್ದಿಷ್ಟಪಡಿಸಿದ್ದಾಗ್ಯೂ, ಯಾವುದೇ ವಿವಾದವನ್ನು ಪರಸ್ಪರ ಚರ್ಚೆಗಳಿಂದ ಪರಿಹರಿಸಿಕೊಳ್ಳಬಹುದಾಗಿದ್ದು, ಇದಕ್ಕೆ ತಪ್ಪಿದಲ್ಲಿ, ಬೆಂಗಳೂರಿನಲ್ಲಿನ ನ್ಯಾಯಾಲಯಗಳಲ್ಲಿ ಇದರ ನ್ಯಾಯ ನಿರ್ಣಯ ಮಾಡಬೇಕಾಗಿರುತ್ತದೆ.

32. ಯಾವುದೇ ನ್ಯಾಯ ನಿರ್ಣಯವು ಇಲ್ಲದಿರುವಲ್ಲಿ, ವಾಷಿಂಗ್ ದರಗಳಿಗೆ ಸಂಬಂಧಿಸಿದಂತೆ ಪ್ರತೀ ಮೆಟ್ರಿಕ್ ಟನ್‌ಗೆ ಕೇವಲ 90/– (ತೊಂಬತ್ತು ರೂಪಾಯಿಗಳು) ರೂ.ಗಳನ್ನು ಕಡಿತಗೊಳಿಸಲು ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಂಡು 2013ರ ನವೆಂಬರ್ 23 ಮತ್ತು 2014ರ ಜನವರಿ 29 ರಂದು ಪತ್ರಗಳನ್ನು ಕಳುಹಿಸಲು ಕೆಪಿಸಿಎಲ್‌ಗೆ ಅನುಮತೀಯವಾಗಿರುವುದಿಲ್ಲ. ಕೆಇಎಂಟಿಎಯು ಸಲ್ಲಿಸಿದ ಬಿಲ್ಲುಗಳಿಂದ ಅಂಥ ಕಡಿತಗಳನ್ನು ಜಾರಿಗೆ ತಂದಿರುವುದು ಕೆಪಿಸಿಎಲ್‌ನ ನಿರಂಕುಶತೆಯಾಗಿರುತ್ತದೆ. ಕೆಪಿಸಿಎಲ್ ತಿರಸ್ಕರಿಸಿದ ವೆಚ್ಚವನ್ನು ಹಿಂಪಡೆಯುವುದಕ್ಕೆ ಸಂಬಂಧಿಸಿದಂಥ ತಗಾದೆಯು ಸಿಎಜಿಯ ವರದಿಯನ್ನು ಮಾತ್ರ ಆಧರಿಸಿರುತ್ತದೆ. ಸಿಎಜಿಯ ವರದಿಯನ್ನು ಮಾತ್ರ ಆಧರಿಸಿ, ತಿರಸ್ಕರಿಸಿದ ವೆಚ್ಚಗಳನ್ನು ಹಿಂದಕ್ಕೆ ಪಡೆಯುವುದಕ್ಕೆ ಸಂಬಂಧಿಸಿದಂತೆ ಕೆಪಿಸಿಎಲ್ 52,37,00,000/– ರೂ.ಗಳನ್ನು (ಐವತ್ತೆರಡು ಕೋಟಿ ಮತ್ತು ಮುವತ್ತೇಳು ಲಕ್ಷ) ತಗಾದೆ ಮಾಡಿರುತ್ತಾರೆ. ಸಿಎಜಿಯು ಮಾಡಿದ ಲೆಕ್ಕ ಪರಿಶೋಧನಾ ಆಕ್ಷೇಪಕ್ಕೆ, ಕೆಪಿಸಿಎಲ್ ತಿರಸ್ಕರಣೆಯ ಅಂಥ ಪರಿಮಾಣೀಕರಣವು ದೋಷಪೂರ್ಣವಾಗಿದೆಯೆಂಬುದನ್ನು ತಾನು ಒಪ್ಪಿಕೊಂಡಿದೆ ಎಂಬುದನ್ನು ಕೆಪಿಸಿಎಲ್ ಮರೆತಂತೆ ಕಾಣುತ್ತಿದೆ. ತನ್ನ ಪ್ರತಿಕ್ರಿಯೆಯಲ್ಲಿ ಕೆಪಿಸಿಎಲ್, ಕೇವಲ ಸಣ್ಣ ಕಲ್ಲುಗಳು ಹಾಗೂ ಜಲ್ಲಿಗಳನ್ನು ಒಳಗೊಂಡ ತಿರಸ್ಕೃತ ವಸ್ತುಗಳನ್ನು ಗಣಿಯಲ್ಲಿ ಮಟ್ಟಸ ಮಾಡಲು ಹಾಗೂ ಇತರೆ ಸುಧಾರಿತ ಕಾರ್ಯಗಳಿಗೆ ಸಂಬಂಧಿಸಿದಂತೆ ಬಳಸಿಕೊಳ್ಳಲಾಗಿರುತ್ತದೆ.

33. ***ಅರುಣ ಕುಮಾರ್ ಅಗರವಾಲ್ –ವಿರುದ್ಧ– ಯೂನಿಯನ್ ಆಫ್ ಇಂಡಿಯಾ*** [6], ಪ್ರಕರಣದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವು, ಕೇವಲ ಸಿಎಜಿಯ ವರದಿಯ ಮೇಲೆ ಮಾತ್ರ ನಂಬಿಕೆ ಇರಿಸಿ ಪರಿಹಾರವನ್ನು ನೀಡುವಂತಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ. ಅಂಥ ವರದಿಗಳು ಯಾವಾಗಲೂ, ಸಂಸದೀಯ ಚರ್ಚೆಗಳಿಗೆ ವಸ್ತುಗಳಾಗುತ್ತವೆ. ಮತ್ತು ಸಾರ್ವಜನಿಕ ಲೆಕ್ಕಪರಿಶೋಧನಾ

6. (2013)7 ಎಸ್‌ಸಿಸಿ 1

ಸಮಿತಿಯು ಸಿಎಜಿ ವರದಿಗೆ ಮಾಡಿರುವ ಆಕ್ಷೇಪಣೆಯನ್ನು ಒಪ್ಪಿಕೊಂಡು ಅಂಥ ವರದಿಯನ್ನು ತಿರಸ್ಕರಿಸುವ ಸಾಧ್ಯತೆಯೂ ಇರುತ್ತದೆ. 2013ರ ಸಿಎಜಿ ವರದಿಯು, ಗುಪ್ತ ಕಲ್ಲಿದ್ದಲು ಫೀಲ್ಡ್ಸ್ ಮತ್ತು ವಾಷರೀಸ್ ಲಿಮಿಟೆಡ್‌ನೊಂದಿಗೆ ಮಾಡಿಕೊಂಡಿರುವ ಮೂರನೇ ಪಕ್ಷಕಾರನ ಗುತ್ತಿಗೆಯನ್ನು ಅವಲಂಬಿಸಿರುತ್ತದೆ. ಸಿಎಜಿಯ ವರದಿಯನ್ನು ಈ ವರೆಗೂ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಾಗಲೀ ಅಥವಾ ಸಾರ್ವಜನಿಕ ವಲಯು ಉದ್ದಿಮೆಗಳ ಸಮಿತಿಯಾಗಲೀ ಒಪ್ಪಿಕೊಂಡಿರುವುದಿಲ್ಲ.

34. ***ಪಠಾಣ್ ಮೊಹಮದ್ ಸುಲೇಮಾನ್ ರೆಹಮತ್ ಖಾನ್ – ವಿರುದ್ಧ– ಗುಜರಾತ್ ಸರ್ಕಾರ್***[6], ಪ್ರಕರಣದಲ್ಲಿ, ಭಾರತದ ಸರ್ವೋಚ್ಚ ನ್ಯಾಯಾಲಯವು, ಒಂದು ವರದಿಯು ಸಂಸತ್ತಿನ ಪರಿಶೋಧನೆಗೆ ಒಳಪಟ್ಟಾಗ, ಅದನ್ನು ಸಿಎಜಿ ವರದಿಯಲ್ಲಿ ಒಳಗೊಂಡಿರುವ ಫಲಿತಗಳು ಮತ್ತು ತೀರ್ಮಾನಗಳಿಗೆ ಉಲ್ಲೇಖಿಸುವುದು ಯುಕ್ತವಾದುದಲ್ಲ.

35. ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು, ಕೇಂದ್ರ ತನಿಖಾ ಸಂಸ್ಥೆ (ಇನ್ನು ಮುಂದೆ ಸಂಕ್ಷಿಪ್ತವಾಗಿ ಸಿಬಿಐ ಎಂದು ಕರೆಯಲಾಗಿರುತ್ತದೆ)ಯು ಕೇವಲ ಸಿಎಜಿಯ ವರದಿಯನ್ನು ಆಧರಿಸಿ ಪ್ರಥಮ ಮಾಹಿತಿ ವರದಿಯನ್ನು ಸಿದ್ಧಪಡಿಸಿರುತ್ತದೆಂದು ನಮಗೆ ತಿಳಿಸಿರುತ್ತಾರೆ. ಕೆಪಿಸಿಎಲ್, ಇಎಂಟಿಎ, ಕೆಇಎಂಟಿಎ ಮತ್ತು ಗುಪ್ತ ಕೋಲ್ ಫೀಲ್ಡ್ಸ್ ಅಂಡ್ ವಾಷರೀಸ್ ಲಿಮಿಟೆಡ್‌ನ ಕೆಲವು ಮಂದಿ ನೌಕರರು ಭಾರತ ದಂಡ ಸಂಹಿತೆಯ 120 ಬಿ ಪ್ರಕರಣದೊಂದಿಗೆ ಓದಲಾದ 420ನೇ ಪ್ರಕರಣ ಹಾಗೂ ಭ್ರಷ್ಟಾಚಾರ ನಿಗ್ರಹ ಅಧಿನಿಯಮ, 1988ರ 13(1)(ಡಿ) ಪ್ರಕರಣಗಳಡಿಯಲ್ಲಿ ಅಪರಾಧಗಳನ್ನು ಎಸಗಿರುತ್ತಾರೆಂದೂ ವಾದಿಸಿರುತ್ತಾರೆ.

36. ಸಿಎಜಿಯ ವರದಿಯು, ಕೇವಲ ಕಾರಣವಾದ ಯಾವುದೇ ಬದ್ಧತೆಗೆ ಸಂಬಂಧಿಸಿದ ಏಕಮಾತ್ರ ಅಥವಾ ಆರಂಭಿಸಬೇಕಾದ ಪ್ರಾಸಿಕ್ಯೂಷನ್‌ಗೆ ಸಂಬಂಧಿಸಿದ ಏಕಮಾತ್ರ ವಿಷಯವನ್ನು ಆಧರಿಸಿರುವುದಿಲ್ಲವೆಂಬುದು ನಮಗೆ ಕಂಡು ಬಂದಿದೆ. ಕೆಪಿಸಿಎಲ್, ಇಎಂಟಿಎ ಮತ್ತು ಕೆಇಎಂಟಿಎಯ ಗೊತ್ತಿಲ್ಲದ ನೌಕರರ ವಿರುದ್ಧ

6. (2014) 4 ಎಸ್‌ಸಿಸಿ 156

ಸಿಬಿಐ, ಪ್ರಥಮ ಮಾಹಿತಿ ವರದಿಯನ್ನು ಸಿದ್ಧಪಡಿಸಿದ್ದಾಗ್ಯೂ, 52,37,00,000 (ಐವತ್ತೆರಡು ಕೋಟಿ ಮತ್ತು ಮೂವತ್ತೇಳು ಲಕ್ಷ ರೂಪಾಯಿಗಳು ಮಾತ್ರ) ರೂ.ಗಳನ್ನು ವಸೂಲಾತಿಗೆ ಸಂಬಂಧಿಸಿದಂತೆ ಕೆಪಿಸಿಎಲ್ ಏಕಪಕ್ಷೀಯವಾಗಿ ತಗಾದೆ ಮಾಡಿತ್ತೆಂಬುದಕ್ಕೆ ಯಾವುದೇ ಕಾನೂನಾತ್ಮಕ ಆಧಾರ ಅಥವಾ ಸಾಕ್ಷ್ಯಗಳನ್ನು ಒದಗಿಸಿರುವುದಿಲ್ಲ. ಇಂಥ ಕ್ರಮವು ನಿರಂಕುಶವಾದುದಾಗಿದ್ದು, ಇದು ಕಾನೂನಿನಲ್ಲಿ ಊರ್ಜಿತವಾಗುವುದಿಲ್ಲವೆಂದು ನಾವು ಅಭಿಪ್ರಾಯಪಡುತ್ತೇವೆ.

37. ತದನುಸಾರವಾಗಿ, 2016ರ 2995ರಿಂದ 2996ರ ವರೆಗಿನ ರಿಟ್ ಅರ್ಜಿಗಳನ್ನು ಅಂಗೀಕರಿಸಲಾಗಿರುತ್ತದೆ. ಕೆಪಿಸಿಎಲ್ ಹೊರಡಿಸಿದ 2014ರ ಜುಲೈ 31ನೇ ದಿನಾಂಕದ (ಅನುಬಂಧ–ಎ) 2014ರ ಡಿಸೆಂಬರ್ 24ನೇ ದಿನಾಂಕದ (ಅನುಬಂಧ – ಬಿ) ಹಾಗೂ 2015ರ ಮಾರ್ಚ್ 20/23ನೇ ದಿನಾಂಕಗಳಂದು (ಅನುಬಂಧ – ಸಿ) ಪತ್ರಗಳನ್ನು ರದ್ದುಪಡಿಸಲಾಗಿರುತ್ತದೆ.

38. ಮಾರ್ಚ್ 2013ರ ಸಿಎಜಿ ವರದಿಯನ್ನು ಆಧಾರವಾಗಿಟ್ಟುಕೊಂಡು ರಿಟ್ ಅರ್ಜಿದಾರರ ವಿರುದ್ಧ ವಸೂಲಿ ಮಾಡಲು ಕೆಪಿಸಿಎಲ್‌ಗೆ ನಾನು ನಿರ್ದೇಶಿಸುವುದಿಲ್ಲ.

39. 2016ರ 2997ರಿಂದ 2998ರ ವರೆಗಿನ ರಿಟ್ ಅರ್ಜಿಗಳನ್ನು ಅಂಗೀಕರಿಸಲಾಗಿರುತ್ತದೆ. ಪ್ರತೀ ಮೆಟ್ರಿಕ್ ಟನ್‌ಗೆ ಕೇವಲ 90/– (ತೊಂಬತ್ತು ರೂಪಾಯಿಗಳು ಮಾತ್ರ) ರೂ.ಗಳನ್ನು ಕಡಿತಗೊಳಿಸಬೇಕೆಂದು ಅಧಿಸೂಚಿಸಿದ 2013ರ ನವೆಂಬರ್ 23ರ ಹಾಗೂ 2014ರ ಜನವರಿ 29ರ ಪತ್ರಗಳನ್ನು ರದ್ದುಪಡಿಸಲಾಗಿರುತ್ತದೆ. ತದನುಸಾರವಾಗಿ, ರಿಟ್ ಅರ್ಜಿದಾರರು, 2013ರ ನವೆಂಬರ್ 23ರ ಹಾಗೂ 2014ರ ಜನವರಿ 29ರ ಪತ್ರಗಳಲ್ಲಿ ಸೂಚಿಸಿದಂತೆ ಕೆಪಿಸಿಎಲ್ ಕಡಿತಗೊಳಿಸಿರುವ ಮೊಬಲಗನ್ನು ಹಿಂದಕ್ಕೆ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

40. ಆದಾಗ್ಯೂ, ನಾವು, ಈ ರಿಟ್ ಅರ್ಜಿಗಳಿಗೆ ಸಂಬಂಧಿಸಿದ ವೆಚ್ಚಗಳನ್ನು ಭರಿಸಲು ಪಕ್ಷಕಾರರಿಗೆ ನಿರ್ದೇಶಿಸಿರುತ್ತೇವೆ.